**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 371/2018**

ಚಾಸಾ–06, ಪ್ರಾ.ಸಾ–03

| | | |
|---|---|---|
| ಹೆಸರು | : | ಡಾ: ಯೋಗೀಶ್ ಆರ್ |
| ತಂದೆಯ ಹೆಸರು | : | ಲೇಟ್ ಜಿ.ಆರ್. ರಾಜಶೇಖರಪ್ಪ |
| ವಯಸ್ಸು | : | 48 |
| ವೃತ್ತಿ | : | ತುರ್ತು ಚಿಕಿತ್ಸಾ ವೈದ್ಯಾಧಿಕಾರಿ,<br>ಕೆ.ಆರ್. ಆಸ್ಪತ್ರೆ, ಮೈಸೂರು. |
| ವಾಸ | : | ಮೈಸೂರು |

**ದಿನಾಂಕಃ 19.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು ನವೆಂಬರ್ 2011 ರಿಂದ ಇಲ್ಲಿಯವರೆಗೆ ಸದರಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 11.09.2017 ರಂದು ಮಧ್ಯಾಹ್ನ 1.05 ಗಂಟೆಗೆ ಪ್ರಾಸಾ–1 ರವರು ತನ್ನ ಗಂಡ ದಾದಾ ಎನ್ನುವವರು ದಿನಾಂಕ 10.09.2017 ರಂದು ರಾತ್ರಿ 10.00 ಗಂಟೆ ಸುಮಾರಿಗೆ ಹಲ್ಲೆ ಮಾಡಿದ್ದರು ಎನ್ನುವ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ನನ್ನ ಬಳಿ ಬಂದಿದ್ದರು. ಅವರನ್ನು ಪರೀಕ್ಷಿಸಿದಾಗ ಅವರ ತಲೆಯ ಹಿಂಭಾಗದಲ್ಲಿ ಊತ ಮತ್ತು ನೋವು, ಕತ್ತಿನ ಮುಂಭಾಗದಲ್ಲಿ ತರಚಿದ ಗಾಯ, ಬಲ ಎದೆಯ ಮೇಲ್ಭಾಗದಲ್ಲಿ ಎರಡು ತರಚಿದ ಗಾಯಗಳು ಮತ್ತು ಎಡಭಾಗದ ಎದೆಯ ಮೇಲೆ 2 x 2 ಸೆಂಟಿ ಮೀಟರ್ ತರಚಿದ ಗಾಯವಿದ್ದವು. ಆ ಗಾಯಗಳು ಸಾದಾ ಸ್ವರೂಪದ ಗಾಯ ಆಗಿದ್ದವು.

ಫ್ರಾಸಾ-1 ರವರಿಗೆ ಚಿಕಿತ್ಸೆ ನೀಡಿರುತ್ತೇನೆ. ಆ ಕುರಿತು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.3 ಮತ್ತು 2(ಎ) ಎಂದು ಗುರುತಿಸಲಾಯಿತು.

ಈ ಮೇಲೆ ಹೇಳಿದ 1ನೇ ಗಾಯವು ಒಬ್ಬ ಮಹಿಳೆಯ ತಲೆಯ ಜುಟ್ಟನ್ನು ಹಿಡಿದು ಗೋಡೆಗೆ ತಾಗಿಸಿದರೆ ಮತ್ತು ಈ ಮೇಲೆ ಹೇಳಿದ ಉಳಿದ ಗಾಯಗಳು ಕೈಯಿಂದ ಪರಚಿದರೆ ಆಗಬಹುದು.

**ಪಾಟೀ ಸವಾಲುಃ ಶ್ರೀ ಟಿ.ಎಂ.ಎಸ್. ಆರೋಪಿತರ ಪರ ವಕೀಲರಿಂದ**

ದಿನಾಂಕ 10.09.2017 ರಂದು ಘಟನೆಯಾಗಿದೆ ಎಂದು ಫ್ರಾಸಾ-1 ರವರು ಹೇಳಿದ್ದರು. ಅವರ ಗಂಡನ ಹೆಸರು ನಿರ್ದಿಷ್ಟವಾಗಿ ಏನು ಎಂದು ಕೇಳಿ ನಿಪಿ.3 ರಲ್ಲಿ ಬರೆಯಲು ತೊಂದರೆ ಇತ್ತಾ ಎಂದರೆ ಅವರು ಹೇಳಿದ ಹಾಗೇ ನಿಪಿ.3 ರಲ್ಲಿ ಬರೆದಿದ್ದೇನೆ. ಗಾಯದ ಅವಧಿಯನ್ನು ನಿಪಿ.3 ರಲ್ಲಿ ನಮೂದಿಸಿಲ್ಲ ಎಂದರೆ ಸರಿ.

ಈ ಮೇಲೆ ಹೇಳಿದ ಗಾಯಗಳು ಒಬ್ಬ ವ್ಯಕ್ತಿಯು ಆಯಾತಪ್ಪಿ ಬಿದ್ದಾಗ ಆಗಬಹುದು ಎಂದರೆ ಆ ವ್ಯಕ್ತಿ 3-4 ಬಾರಿ ಹಿಂದೆ ಮುಂದೆ ಬಿದ್ದಾಗ ಆಗಬಹುದು. ತರಚಿದ ಗಾಯವು ಒರಟಾದ ವಸ್ತು ದೇಹದ ಭಾಗಕ್ಕೆ ತರಚಿದಾಗ ಆಗಬಹುದು ಎಂದರೆ ಸರಿ.

**ಸಿಸಿ ಸಂಖ್ಯೆ.371/2018**

ಫ್ರಾಸಾ−1 ರವರಿಗೆ ಸಹಾಯವಾಗಲೀ ಎಂದು ಪೊಲೀಸರ ಕೋರಿಕೆಯಂತೆ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,**
**ತಿ. ನರಸೀಪುರ**

**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 371/2018**

ಚಾ.ಸಾ–03, ಪ್ರಾ.ಸಾ–04

| | | |
|---|---|---|
| ಹೆಸರು | : | ಸಿದ್ದರಾಜು |
| ತಂದೆಯ ಹೆಸರು | : | ಲೇಟ್ ಬಸವಯ್ಯ |
| ವಯಸ್ಸು | : | 51 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸ | : | ತುಂಬಲ ಗ್ರಾಮ, ತಿ.ನರಸೀಪುರ ತಾಲ್ಲೂಕು |

**ದಿನಾಂಕಃ 19.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಈ ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

1ನೇ ಆರೋಪಿತ ಪ್ರಾಸಾ–1 ರವರನ್ನು ವಿವಾಹವಾದ ನಂತರ ಆಕೆಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡಿದ್ದು, ಅದಕ್ಕೆ 2 ರಿಂದ 4ನೇ ಆರೋಪಿತರು ಸೇರಿಕೊಂಡಿದ್ದು, ದಿನಾಂಕ 10.09.2017 ರಂದು ರಾತ್ರಿ 10.00 ಗಂಟೆ ಸಮಯದಲ್ಲಿ ಆರೋಪಿತರ ಮನೆಯ ಬಳಿ ಆರೋಪಿತರು ಪ್ರಾಸಾ–1 ರವರ ಜೊತೆ ಗಲಾಟೆ ಮಾಡಿ, ಆಕೆಯ ಜುಟ್ಟನ್ನು ಹಿಡಿದು ಎಳೆದಾಡಿ, ಗೋಡೆಗೆ ಗುದ್ದಿಸಿ,

ಆಕೆಯ ಕತ್ತನ್ನು ಮತ್ತು ಎದೆಯನ್ನು ಕೈಯಿಂದ ಪರಚಿದ್ದು, ನಾನು ಮತ್ತು ಚಾಸಾ–4 ರವರು ಗಲಾಟೆಯನ್ನು ಬಿಡಿಸಿ, ಪಂಚಾಯಿತಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ಕುರಿತು ದಿನಾಂಕ 15.09.2017 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅದನ್ನು ನಿಪಿ.4 ಎಂದು ಗುರುತಿಸಲಾಯಿತು. ನಾನು ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಇರುವುದಿಲ್ಲ.**

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ತಿ.ನರಸೀಪುರ**

**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**
**ಸಿಸಿ ಸಂಖ್ಯೆ: 371/2018**

ಚಾ.ಸಾ–04, ಪ್ರಾ.ಸಾ–05

| | | |
|---|---|---|
| ಹೆಸರು | : | ರಾಮಯ್ಯ |
| ತಂದೆಯ ಹೆಸರು | : | ಲೇಟ್ ಜವರಯ್ಯ |
| ವಯಸ್ಸು | : | 63 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸ | : | ತುಂಬಲ ಗ್ರಾಮ, ತಿ.ನರಸೀಪುರ ತಾಲ್ಲೂಕು |

**ದಿನಾಂಕಃ 19.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಈ ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ನನ್ನ ಸಮಕ್ಷಮ ಪಂಚನಾಮ ಜರುಗಿಸಿಲ್ಲ. ಪೊಲೀಸರು ನನ್ನ ಸಹಿಯನ್ನು ಮಾತ್ರ ಪಡೆದಿರುತ್ತಾರೆ. ಸಾಕ್ಷಿಯ ಸಹಿ ಇರುವ ದಾಖಲೆಯು ಸ್ಥಳ ಪಂಚನಾಮವಾಗಿದ್ದು, ಅದು ಈಗಾಗಲೇ ನಿಪಿ–2 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

1ನೇ ಆರೋಪಿತ ಫ್ರಾಸಾ-1 ರವರನ್ನು ವಿವಾಹವಾದ ನಂತರ ಆಕೆಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡಿದ್ದು, ಅದಕ್ಕೆ 2 ರಿಂದ 4ನೇ ಆರೋಪಿತರು ಸೇರಿಕೊಂಡಿದ್ದು, ದಿನಾಂಕ 10.09.2017 ರಂದು ರಾತ್ರಿ 10.00 ಗಂಟೆ ಸಮಯದಲ್ಲಿ ಆರೋಪಿತರ ಮನೆಯ ಬಳಿ ಆರೋಪಿತರು ಫ್ರಾಸಾ-1 ರವರ ಜೊತೆ ಗಲಾಟೆ ಮಾಡಿ, ಆಕೆಯ ಜುಟ್ಟನ್ನು ಹಿಡಿದು ಎಳೆದಾಡಿ, ಗೋಡೆಗೆ ಗುದ್ದಿಸಿ, ಆಕೆಯ ಕತ್ತನ್ನು ಮತ್ತು ಎದೆಯನ್ನು ಕೈಯಿಂದ ಪರಚಿದ್ದು, ನಾನು ಮತ್ತು ಚಾಸಾ-4 ರವರು ಗಲಾಟೆಯನ್ನು ಬಿಡಿಸಿ, ಪಂಚಾಯಿತಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ಕುರಿತು ದಿನಾಂಕ 15.09.2017 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅದನ್ನು ನಿಪಿ.5 ಎಂದು ಗುರುತಿಸಲಾಯಿತು.

ದಿನಾಂಕ 10.09.2017 ರಂದು ಆಗಿದ್ದ ಘಟನೆಯ ಸಂಬಂಧ ದಿನಾಂಕ 15.09.2017 ರಂದು ಬೆಳಿಗ್ಗೆ 11.15 ರಿಂದ 11.45 ಗಂಟೆ ಸಮಯದಲ್ಲಿ ಘಟನಾ ಸ್ಥಳದಲ್ಲಿ ಪಂಚನಾಮವನ್ನು ನಿಪಿ.2 ರಂತೆ ಫ್ರಾಸಾ-1 ರವರು ತೋರಿಸಿದ ಪ್ರಕಾರ ನನ್ನ ಮತ್ತು ಚಾಸಾ-5 ರವರ ಸಮಕ್ಷಮ ಜರುಗಿಸಲಾಯಿತು ಎಂದರೆ ಸರಿಯಲ್ಲ.

ನಾನು ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಇರುವುದಿಲ್ಲ.**

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ತಿ.ನರಸೀಪುರ**